**JANUARY 30, 2025**
**ALL INDIA RADIO- DHARWAD**
**PRADESH SAMACHARA (KANNADA)-12 NOON**

**ಸಾಲ ವಸೂಲಾತಿ ವೇಳೆ, ಸಾಲಗಾರರಿಗೆ ಕಿರುಕುಳ ನೀಡುತ್ತಿರುವ, ಸಣ್ಣ ಹಣಕಾಸು ಸಂಸ್ಥೆಗಳನ್ನು ಕಾನೂನಿನಡಿ ನಿಯಂತ್ರಿಸಲು, ಮಸೂದೆಯ ಕರಡು ಸಿದ್ಧವಾಗಿದ್ದು, ಮಸೂದೆ ಸಾಧಕ ಬಾಧಕಗಳ ಕುರಿತು ಇಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ, ಚರ್ಚಿಸಲಾಗುವುದು ಎಂದು, ಕಾನೂನು ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಮಸೂದೆ ಅಂತಿಮಗೊಳಿಸುವ ಸಂಬಂಧ, ವಿಧಾನಸೌಧದಲ್ಲಿ ಗೃಹ ಖಾತೆ ಸಚಿವ ಜಿ. ಪರಮೇಶ್ವರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿ, ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.**

<><><>

**ಬೆಂಗಳೂರಿನ ಅರಮನೆ ಜಾಗೆಯನ್ನು, ನಿರ್ದಿಷ್ಟ ಉದ್ದೇಶಕ್ಕೆ ಬಳಸಿಕೊಳ್ಳುವುದು, ರಾಜ್ಯ ಸರ್ಕಾರದ ಅಧಿಕಾರ ಎಂಬ ಸುಗ್ರೀವಾಜ್ಞೆಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಹಿ ಹಾಕಿದ್ದಾರೆ. ಅರಮನೆ ಮೈದಾನದ 15 ದಶಾಂಶ 3-9 ಎಕರೆ ಜಾಗೆಯನ್ನು ಸ್ವಾಧೀನಕ್ಕೆ ಪಡೆದು, ರಸ್ತೆ ಅಗಲೀಕರಣ ಕಾಮಗಾರಿಗೆ ಪರ್ಯಾಯವಾಗಿ, ಮೈಸೂರು ರಾಜ ಮನೆತನದ ವಾರಸುದಾರರಿಗೆ, 3 ಸಾವಿರದ 14 ಕೋಟಿ ರೂಪಾಯಿ ಟಿ.ಡಿ.ಆರ್ ಪರಿಹಾರ ನೀಡಬೇಕು ಎನ್ನುವ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆ, 1996ರ ಬೆಂಗಳೂರು ಅರಮನೆ ಸ್ವಾಧೀನ ಮತ್ತು ವರ್ಗಾವಣೆ ಕಾಯ್ದೆಗೆ ಪೂರಕವಾಗಿ, ಸುಗ್ರೀವಾಜ್ಞೆ ಹೊರಡಿಸಲಾಗಿದೆ ಎಂದು, ರಾಜ್ಯ ಪರಿಪತ್ರ ತಿಳಿಸಿದೆ.**

<><><>

**ಮಹಾ ಕುಂಭ ಮೇಳ ನಡೆಯುತ್ತಿರುವ, ಉತ್ತರಪ್ರದೇಶದ ಪ್ರಯಾಗ್‌ರಾಜ್‌ಗೆ ವಿಮಾನಯಾನ ಸೇವೆ ಒದಗಿಸುತ್ತಿರುವ, ವಿಮಾನಯಾನ ಕಂಪೆನಿ, ಮೂರ್ನಾಲ್ಕು ಪಟ್ಟು ದರ ವಿಧಿಸುತ್ತಿರುವ ಬಗ್ಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ನಾಗರಿಕ ವಿಮಾನಯಾನ ನಿರ್ದೇಶನಾಲಯಕ್ಕೆ ಪತ್ರ ಬರೆದು, ದರವನ್ನು ಮಿತಿಯಲ್ಲಿ ಇರಿಸುವಂತೆ ಒತ್ತಾಯಿಸಿದ ಹಿನ್ನೆಲೆ, ಖಾಸಗಿ ವಿಮಾನ ಕಂಪೆನಿ, ಶೇಕಡ 30 ರಿಂದ 50 ರಷ್ಟು ದರ ಇಳಿಕೆ ಮಾಡಿ, ನಿನ್ನೆ ಸಂಜೆಯಿಂದ ಅನ್ವಯವಾಗುವಂತೆ, ಕ್ರಮ ಕೈಗೊಂಡಿದೆ.**

<><><>

**ಮೌನಿ ಅಮಾವಾಸ್ಯೆ ನಿಮಿತ್ತ, ಉತ್ತರಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಿನ್ನೆ ಬೆಳಗಿನ ಜಾವ ಮಹಾಕುಂಭ ಮೇಳದ ಪುಣ್ಯ ಸ್ನಾನದ ಸಂದರ್ಭದಲ್ಲಿ, ಉಂಟಾದ, ಕಾಲ್ತುಳಿತದಲ್ಲಿ ಮೃತಪಟ್ಟ ಬೆಳಗಾವಿಯ ನಾಲ್ವರು ಯಾತ್ರಾರ್ಥಿಗಳ**

ಮೃತದೇಹ ತರಲು ರಾಜ್ಯ ಸರ್ಕಾರ ನೋಡಲ್ ಅಧಿಕಾರಿಗಳನ್ನು ನೇಮಿಸಿದೆ. ಇಂದು ಮೃತದೇಹಗಳು ಬೆಳಗಾವಿ ತಲುಪುವ ಸಾಧ್ಯತೆ ಇದೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋ ’ನ್ ಈ ಮಾಹಿತಿ ನೀಡಿ, ಯಾತ್ರಾರ್ಥಿಗಳ ಕುಟುಂಬದವರು, ಸಹಾಯವಾಣಿ ಸಂಖ್ಯೆ 83124 07200 ನ್ನು ಸಂಪರ್ಕಿಸಿ, ಹೆಚ್ಚಿನ ಮಾಹಿತಿ, ಪಡೆಯಬಹುದು ಎಂದರು.

<><><>

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ರಾಜ್ಯದ 21 ಜಿಲ್ಲೆಗಳ, 4 ಸಾವಿರದ 80 ಗ್ರಾಮ ಪಂಚಾಯ್ತಿ ಸದಸ್ಯರಿಗೆ, 'ಸಾಕ್ಷರ ಸನ್ಮಾನ', 100 ಗಂಟೆಗಳ ವಿಶೇ ’ ಕಲಿಕಾ ಬೋಧನಾ ತರಗತಿ ನಡೆಸಲಾಗಿದೆ. ಆ ಪೈಕಿ 3 ಸಾವಿರದ 154 ಸದಸ್ಯರಿಗೆ 'ಸಾಕ್ಷರ ಸನ್ಮಾನ' ಕಾರ್ಯಕ್ರಮದಡಿ ವಿಶೇ ’ ತರಗತಿಗಳ ಮೂಲಕ ಓದು – ಬರೆಹ ಕಲಿಸಲಾಗಿದ್ದು, ಈ ಕುರಿತು ಹಾವೇರಿ ಜಿಲ್ಲಾ ವಯಸ್ಕರ ಪ್ರಭಾರಿ ಶಿಕ್ಷಣಾಧಿಕಾರಿ ಬಿ.ಎಂ.ಬೇವಿನಮರದ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

ಬಿ.ಎಂ. ಬೇವಿನಮರದ ಧ್ವನಿ 36 ಸೆಕೆಂದುಗಳು

<><><>

ಮಹಾತ್ಮ ಗಾಂಧಿಜೀಯವರ ಪುಣ್ಯ ತಿಥಿ ಇಂದು. ಈ ದಿನವನ್ನು ಸರ್ವೋದಯ ದಿನ ಹಾಗೂ ಹುತಾತ್ಮರ ದಿನವಾಗಿ, ಆಚರಿಸಲಾಗುತ್ತಿದೆ. ಮಹಾತ್ಮ ಗಾಂಧೀಜಿ ಪುಣ್ಯತಿಥಿ ಹಿನ್ನೆಲೆ, ಆರೋಗ್ಯ ಇಲಾಖೆ, ಇಂದಿನಿಂದ ಫೆಬ್ರವರಿ 13 ರ ವರೆಗೆ, 'ಸ್ಪರ್ಷ ಕು ೃ ರೋಗ ಅರಿವು ಆಂದೋಲನ'ವನ್ನು ರಾಜ್ಯಾದ್ಯಂತ ಆಯೋಜಿಸಿದೆ.

<><><>

ಮಂಡ್ಯ ಜಿಲ್ಲೆಯ ವಿ.ಸಿ ಫಾರಂನಲ್ಲಿ ನೂತನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆಗೆ ರಾಜ್ಯ ಸರ್ಕಾರ ತಾತ್ವಿಕ ಅನುಮೋದನೆ ನೀಡಿ ಆದೇಶ ಹೊರಡಿಸಿದೆ. 2024–25ನೇ ಸಾಲಿನ ಬಜೆಟ್ ಭಾ ’ಣದ ದಲ್ಲಿ ಸಿಎಂ ಸಿದ್ದರಾಮಯ್ಯರವರು ಮಂಡ್ಯ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯ ಸಾಧ್ಯತೆ ಕುರಿತು ಪರಿಶೀಲನೆಗೆ ಸಮಿತಿ ರಚಿಸುವುದಾಗಿ ಘೋ ’ಣೆ ಮಾಡಿದ ಒಂದು ವ ’ರ್ದೊಳಗೆ ವಿವಿ ಪ್ರಾರಂಭಕ್ಕೆ ಆದೇಶ ಹೊರಬಿದ್ದಿದೆ. ಶೀಘ್ರವೇ ವಿಶೇ ’ಾಧಿಕಾರಿಗಳನ್ನು ನೇಮಿಸಿ ಪ್ರಸಕ್ತ ಸಾಲಿನಲ್ಲಿಯೇ ವಿ.ವಿ ಕಾರ್ಯಾರಂಭ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸಭೆ, ಇಂದು ಮಧ್ಯಾಹ್ನ 2 ಗಂಟೆಗೆ, ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಲಿದೆ ಎಂದು, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>